ಪ್ರಾಧಿಕಾರ ರಚಿಸಿರುತ್ತದೆ. ಸಮಿತಿ ಮತ್ತು ಪ್ರಾಧಿಕಾರ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತದೆ.

ಅ) ದಾನಿಗಳು ಹತ್ತಿರದ ಸಂಬಂಧಿಕರು ಇಲ್ಲದಿದ್ದಲ್ಲಿ ಸರ್ಕಾರ ರಚಿಸಿರುವ ಅಥರೈಜೇಷನ್ ಸಮಿತಿಯ ಪೂರ್ವಾನ್ವಯ ಅನುಮತಿ ಪಡೆಯುವ ಅಗತ್ಯವಿದೆ.

ಇ) ಒಂದು ಪ್ರಕರಣ ಮಾತ್ರ ಕಂಡು ಬಂದಿದೆ.

ಈ) ತನಿಖೆಯ ಹಂತದಲ್ಲಿರುತ್ತದೆ.

ಉ) ಅಥರೈಜೇಷನ್ ಸಮಿತಿಯ ಅನುಮೋದನೆಯ ಆಧಾರದ ಮೇಲೆ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. ಕಿಡ್ನಿ ದಾನ ಕೊಟ್ಟಿರುವ ವ್ಯಕ್ತಿಯ ದೂರಿನ ಮೇಲೆ ಮೊಕದ್ದಮೆಯನ್ನು ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಲಾಗಿ ತನಿಖೆ ಮುಂದುವರೆದಿದೆ.

ಊ) ಪ್ರಕರಣವು ತನಿಖೆ ಹಂತದಲ್ಲಿದೆ.

ಶಿಕಾರಿಪುರ, ಶಿರಾಳಕೊಪ್ಪ ಆಸ್ಪತ್ರೆ ಕಾಮಗಾರಿ

1756 (2044) ಶ್ರೀ ಮಹಾಲಿಂಗಪ್ಪ ಬಿ.ಎನ್. (ಶಿಕಾರಿಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ಶಿರಾಳಕೊಪ್ಪ ಆಸ್ಪತ್ರೆ, ಕಟ್ಟಡಕ್ಕೆ ಮಂಜೂರಾದ ಹಣ ಎಷ್ಟು?

ಆ) ಕಾಮಗಾರಿ ಪೂರ್ಣಗೊಂಡಿದೆಯೇ; ಅಂದಾಜು ಪಟ್ಟಿಯ ಪ್ರಕಾರ ಕೆಲಸ ಆಗಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಶಿಕಾರಿಪುರ ತಾಲ್ಲೂಕು ಮಟ್ಟದ ಆಸ್ಪತ್ರೆಯ ನವೀಕರಣ ಮತ್ತು ವಿಸ್ತರಣೆಗೆ ಆಗಿರುವ ಒಟ್ಟು ವೆಚ್ಚ ರೂ. 74.65 ಲಕ್ಷಗಳು

ಇದೇ ಯೋಜನೆಯಡಿ ಶಿರಾಳಕೊಪ್ಪ ಸಮುದಾಯ ಆರೋಗ್ಯ ಕೇಂದ್ರದ ನವೀಕರಣ ಮತ್ತು ವಿಸ್ತರಣೆಗೆ ಆಗಿರುವ ಒಟ್ಟು ವೆಚ್ಚ ರೂ. 91.32 ಲಕ್ಷಗಳು.

ಆ) ಹೌದು. ಅಂದಾಜಿನಲ್ಲಿ ಅಳವಡಿಸಿದ ಎಲ್ಲಾ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.

ಶಿಕಾರಿಪುರ ಆಸ್ಪತ್ರೆ ಕಾಮಗಾರಿಗಳು ದಿನಾಂಕ 25.1.2001 ರಂದು ಮುಗಿದಿದೆ ಹಾಗೂ ಶಿರಾಳಕೊಪ್ಪ ಆಸ್ಪತ್ರೆ ಕಾಮಗಾರಿಗಳು ದಿನಾಂಕ 21.4.2002 ರಂದು ಪೂರ್ಣಗೊಂಡಿರುತ್ತದೆ.

ಗ್ರಾಮೀಣ ಪ್ರದೇಶಕ್ಕೆ ನೀರು ಸರಬರಾಜು

1757 (2045) ಶ್ರೀ ಮಹಾಲಿಂಗಪ್ಪ ಬಿ.ಎನ್. (ಶಿಕಾರಿಪುರ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಳೂರು ಅಂಬ್ಲಿಗೊಳ, ಬಿಸಿಲಹಳ್ಳಿ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಮಂಜೂರಾಗಿದೆಯೇ;

ಆ) ಮಂಜೂರಾಗಿದ್ದಲ್ಲಿ, ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣವೇನು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಹೌದು

ಆ) ಮಳೂರು ಮತ್ತು ಅಂಬ್ಲಿಗೊಳ ಗ್ರಾಮಗಳ ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡಿದ್ದು, ಸದರಿ ಗ್ರಾಮಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ಬಿಸಿಲಹಳ್ಳಿ